ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ತಾಂ.ಶಿ.ನಿ./ಎನ್.ಬಿ.ಎ-ಇಂ/2015-16

ನಿರ್ದೇಶಕರ ಕಛೇರಿ,
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ,
ಅರಮನೆ ರಸ್ತೆ, ಬೆಂಗಳೂರು
ದಿ:1.7.2017

**ಸುತ್ತೋಲೆ**

ವಿಷಯ: ಸರ್ಕಾರಿ ಇಂಜಿನೀಯರಿಂಗ್ ಕಾಲೇಜುಗಳ ಮಾನ್ಯತಾ ಸಂಬಂಧಿ ತರಬೇತಿ ಕಾರ್ಯಗಾರಕ್ಕೆ ಹಾಜರಾಗುವ ಕುರಿತು.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದಲ್ಲಿನ ಎಲ್ಲಾ ಸರ್ಕಾರಿ ಇಂಜಿನೀಯರಿಂಗ್ ಕಾಲೇಜುಗಳ ಕಾರ್ಯಕ್ರಮಗಳನ್ನು (Programs) ರಾಷ್ಟ್ರೀಯ ಮಾನ್ಯತಾ ಮಂಡಳಿಯವರಿಂದ ಮಾನ್ಯತಾ ಮೌಲ್ಯಮಾಪನ ನಡೆಸಲು ತಯಾರಿ ಮಾಡಿಕೊಳ್ಳುವಂತೆ ಮಾನ್ಯ ಉನ್ನತ ಶಿಕ್ಷಣ ಸಚಿವರು ಸೂಚಿಸಿ, ಈ ಸಂಬಂಧ ಇಂಜಿನೀಯರಿಂಗ್ ಕಾಲೇಜುಗಳ ಎಲ್ಲಾ ಕಾರ್ಯಕ್ರಮಗಳನ್ನು ರಾಷ್ಟ್ರೀಯ ಮಾನ್ಯತಾ ಮಂಡಳಿಯಿಂದ ಮಾನ್ಯತಾ ಮೌಲ್ಯಮಾಪನಕ್ಕೆ ಒಳಪಡಿಸಲಾಗುವುದು ಎಂಬ ಭರವಸೆಯನ್ನೂ ಸಹ ಕರ್ನಾಟಕ ವಿಧಾನಪರಿಷತ್ತಿನಲ್ಲಿ ನೀಡಿರುತ್ತಾರೆ.

ಅದರಂತೆ, ತಾಂತ್ರಿಕ ಶಿಕ್ಷಣ ಇಲಾಖೆಯು ಬೆಂಗಳೂರಿನ ಪ್ರತಿಷ್ಠಿತ ಆರ್‌ವಿ ಕಾಲೇಜ್ ಆಫ್ ಇಂಜಿನೀಯರಿಂಗ್ ನ ಸಹಯೋಗದೊಂದಿಗೆ ಎರಡು ದಿನಗಳಂತೆ ಮೂರು ಹಂತಗಳಲ್ಲಿ ಒಟ್ಟು ಆರು ದಿನಗಳ ತರಬೇತಿ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿರುತ್ತದೆ. ಎರಡನೇ ಹಂತದ ತರಬೇತಿ ಕಾರ್ಯಾಗಾರವನ್ನು ದಿನಾಂಕ 13.07.2017 ರಿಂದ 14.07.2017ರವರೆಗೆ ಆರ್‌ವಿ ಕಾಲೇಜ್ ಆಫ್ ಇಂಜಿನೀಯರಿಂಗ್, ಮೈಸೂರು ರಸ್ತೆ, ಬೆಂಗಳೂರು ಇಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಾಗಾರಕ್ಕೆ ಪ್ರಾಚಾರ್ಯರು ಹಾಗೂ ಎಲ್ಲಾ ವಿಭಾಗದ ಸಂಯೋಜಕರು (Programs Coordinators), ಮೊದಲ ಹಂತದ ತರಬೇತಿ ಕಾರ್ಯಾಗಾರದಲ್ಲಿ ಹೇಳಲಾದ ಮಾನ್ಯತಾ ಸಂಬಂಧಿ ಮಾಹಿತಿಯೊಂದಿಗೆ ಎರಡನೇ ಹಂತದ ಎರಡು ದಿನಗಳ ಕಾರ್ಯಾಗಾರಕ್ಕೆ ಕಡ್ಡಾಯವಾಗಿ ಹಾಜರಾಗಲು ಸೂಚಿಸಲಾಗಿದೆ. ಕಾರ್ಯಾಗಾರದ ಚಟುವಟಿಕೆಗಳ ವೇಳಾಪಟ್ಟಿಯನ್ನು ಸದರಿ ಸುತ್ತೋಲೆಗೆ ಲಗತ್ತಿಸಲಾಗಿದೆ. ಮುಂದುವರೆದು, ಸದರಿ ಕಾರ್ಯಾಗಾರಕ್ಕೆ ಹಾಜರಾಗುವ ತರಬೇತಾರ್ಥಿಗಳೇ ಮುಂದಿನ ಹಂತದ ತರಬೇತಿ ಕಾರ್ಯಾಗಾರಕ್ಕೆ ಹಾಜರಾಗಲು ಈ ಮೂಲಕ ಸೂಚಿಸಿದೆ.

ನಿರ್ದೇಶಕರು

ಗೆ,

**ಪ್ರಾಚಾರ್ಯರುಗಳು,** ಎಲ್ಲಾ ಸರ್ಕಾರಿ ಇಂಜಿನೀಯರಿಂಗ್ ಕಾಲೇಜುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

ಪ್ರತಿ:

1) **ಎಲ್ಲಾ ಜಂಟಿ ನಿರ್ದೇಶಕರುಗಳ** ಮಾಹಿತಿಗಾಗಿ
2) ಈ ಆಡಳಿತ ಸಂಯೋಜಕರು ತಾಶಿನಿ ಬೆಂಗಳೂರು ಇವರ ಸೂಕ್ತ ಕ್ರಮಕ್ಕಾಗಿ.
3) ನಿರ್ದೇಶಕರ ಆಪ್ತ ಸಹಾಯಕರ ಮಾಹಿತಿಗಾಗಿ.

## NBA TRAINING SCHEDULE FOR GOVERNMENT ENGINEERING COLLEGES (TIER-2 Format)

## Phase -2 *(*13-07-17 to 14-07-17*)*

| Time | Events |
|---|---|
| | **Day-1** |
| 10.00: to 11:30 | Criterion-4, Students performance |
| 11:30 to 11:45 | ***TEA BREAK*** |
| 11:45 to 1:00 | Criteria-5, Faculty information and Contribution |
| 1:00 to 2:00 | ***LUNCH BREAK*** |
| 2:00 to 3:15 | Presentation of the task related to Assignment by individual or group |
| 3.15 to 3.30 | ***TEA BREAK*** |
| 3:30 to 5:00 | Presentation of the task related to Assignment by individual or group |
| 5.00 to 5.15 | Assignment |
| | **Day-2** |
| 10.00: to 11:30 | Criterion-6 & 7: Facility and Technical support |
| 11:30 to 11:45 | ***TEA BREAK*** |
| 11:45 to 1:00 | Criterion- 7 & 8: Continuous support & First Year Academics |
| 1:00 to 2:00 | ***LUNCH BREAK*** |
| 2:00 to 3:15 | Criterion-9: Student support system |
| 3.15 to 3.30 | ***TEA BREAK*** |
| 3:30 to 5:00 | Criterion-10: Governance, Institutional support and Financial Resources |
| 5.00 to 5.15 | Assignment for Phase-3 |

## Phase-3 *(Dates yet to be finalized)*

- **Each group should prepare the SAR for their program and submit it.**
- **Each group should present for 30 Minutes.**
- **Each SAR will be evaluated by the experts.**